ಅ) ಬಾಗೇಪಲ್ಲಿ ಕ್ಷೇತ್ರದಲ್ಲಿ ಚಿತ್ರಾವತಿ ನದಿಗೆ ಹೊಸದಾಗಿ ಕೆರೆ ನಿರ್ಮಾಣ ಮಾಡುವ ಯೋಜನೆ ಸರ್ಕಾರದವರ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಹೌದು.

ಆ) ಪ್ರಸ್ತಾವನೆ ಇನ್ನೂ ತನಿಖಾ ಹಂತದಲ್ಲಿದೆ. ವಿವರವಾದ ತನಿಖೆ ನಂತರ ಯೋಜನೆ ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಶಕ್ಯವಾದಲ್ಲಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಕೋಲಾರ ಜಿಲ್ಲೆಯಲ್ಲಿರುವ ಕೆರೆಗಳಲ್ಲಿ ಹೂಳೆತ್ತುವುದು

38 (34)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಕೆರೆಗಳಲ್ಲಿ ಹೂಳು ಎತ್ತುವ ಕಾರ್ಯಕ್ರಮ ಸರ್ಕಾರದವರ ಮುಂದೆ ಇದೆಯೇ;

ಆ) ಇದ್ದರೆ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಹೌದು

ಆ) ಕೋಲಾರ ಜಿಲ್ಲೆಯಲ್ಲಿನ ಸಣ್ಣ ನೀರಾವರಿ ಕೆರೆಗಳಲ್ಲಿನ ಹೂಳೆತ್ತುವ ಬಗ್ಗೆ ಒಂದು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಮುಂದೆ ದೊರಕಬಹುದಾದ ಅನುದಾನದ ಲಭ್ಯತೆ ಮೇಲೆ ಹಂತ ಹಂತದಲ್ಲಿ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ.

ನೀರಾವರಿ ಕಾಲುವೆಗಳಲ್ಲಿ ಬಿರುಕು ಉಂಟಾಗುತ್ತಿರುವುದು

39 (35)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಬೃಹತ್ ನೀರಿವರಿ ಸಚಿವರು ಈ

ಅ) ರಾಜ್ಯದಲ್ಲಿ ಇತ್ತೀಚೆಗೆ ಪದೇ ಪದೇ ನೀರಾವರಿ ಕಾಲುವೆಗಳಲ್ಲಿ ಬಿರುಕು ಉಂಟಾಗುತ್ತಿರುವುದು ನಿಜವೇ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಆ) ಕಳೆದ 3 ವರ್ಷಗಳಲ್ಲಿ, ಈ ರೀತಿ ಬಿರುಕು ಉಂಟಾದ ಕಾಲುವೆಗಳೆಷ್ಟು ಹಾಗೂ ಅವುಗಳು ಯಾವುವು?

ಇ) ಈ ರೀತಿ ಬಿರುಕು ಉಂಟಾಗಲು ಕಾರಣರಾದವರ ವಿರುದ್ಧ ಸರ್ಕಾರದವರು ಕ್ರಮ ಕೈಗೊಳ್ಳಲು ಉದ್ದೇಶಿಸಿದ್ದಾರೆಯೇ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):

ಅ) ಹೌದು, ಕಾಲುವೆಗಳು ಬಹಳ ಹಳೆಯದಾಗಿರುವುದರಿಂದ ಕಾಲುವೆ ನಿರ್ಮಾಣದ ಸಮಯದಲ್ಲಿ ಸ್ಥಳೀಯ ಲಭ್ಯವಿರುವ ಮಣ್ಣನ್ನು ಉಪಯೋಗಿಸಿರುವ ಕಾರಣ (ಕೆಲವು ಕಾಲುವೆಗಳಲ್ಲಿ) ಏಡಿ, ಹೆಗಣಗಳು ನಾಲೆಯ ಮಣ್ಣೇರಿಯನ್ನು ಕೊರೆಯುವುದರಿಂದ ಬಿರುಕುಗಳು ಉಂಟಾಗಿರುತ್ತವೆ.

ಆ) ಕಳೆದ 3 ವರ್ಷಗಳಲ್ಲಿ ಬಿರುಕು ಉಂಟಾಗಿರುವ ಕಾಲುವೆಗಳು-7 ಅವುಗಳೆಂದರೆ ತುಂಗಭದ್ರಾ ಎಡದಂಡೆ ಕಾಲುವೆ, ಹಾರಂಗಿ ಯೋಜನೆಯ ಕೆ.ಆರ್.ನಗರ ಶಾಖೆ, ವಿಶ್ವೇಶ್ವರಯ್ಯ ನಾಲೆಯಲ್ಲಿ ಕಿ.ಮೀ. ಕಾವೇರಿ ಶಾಖೆ, ಮದ್ದೂರು ಶಾಖೆ, ಕೆರೆಗೋಡು ಶಾಖೆ, ನಾರಾಯಣಪುರ ಎಡದಂಡೆ ಕಾಲುವೆ.

ಇ) ಬಿರುಕು ಉಂಟಾದ ಬಗ್ಗೆ ಪರಿಶೀಲಿಸಿದಾಗ ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಅವರುಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಉಡುಪಿ ಜಿಲ್ಲೆಯಲ್ಲಿ ಪೋಲೀಸ್ ವಸತಿ ಗೃಹಗಳು

40 (24)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಇರುವ ನೌಕರರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇದರಲ್ಲಿ ಎಷ್ಟು ಜನರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ?

ಇ) ಉಡುಪಿ ಜಿಲ್ಲೆಯ ಎಷ್ಟು ನೌಕರರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ?